ಇ) ಸೇಡಂ ತಾಲ್ಲೂಕಿನ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳು

ಈ) ಹೌದು

ಈ ಕಟ್ಟಡಕ್ಕೆ ತಗಲುವ ಅಂದಾಜು ವೆಚ್ಚ ರೂ. 42,000-00 ಗಳಿಗೆ ಮಂಜೂರಾತಿ ನೀಡಲಾಗಿದ್ದು, ಈ ಪೈಕಿ 23-3-1988 ರವರೆಗೆ ರೂ. 36,074-00 ಗಳನ್ನು ಖರ್ಚು ಮಾಡಿದೆ.

ಉ) ಈವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ, ಜಿಲ್ಲಾ ಪರಿಷತ್ ಗುಲ್ಬರ್ಗಾರವರಿಗೆ ತಪ್ಪಿತಸ್ಥರ ಮೇಲೆ ಕ್ರಮ ಕೈಗೊಳ್ಳುವಂತೆ ತಿಳಿಸಿದೆ.

ಊ) ಈ ಕಟ್ಟಡವನ್ನು ಆದಷ್ಟುಬೇಗ ಪೂರ್ಣಗೊಳಿಸಲು ಮುಖ್ಯ ಕಾರ್ಯದರ್ಶಿ, ಜಿಲ್ಲಾಪರಿಷತ್, ಗುಲ್ಬರ್ಗಾ ಇವರನ್ನು ಕೋರಿದೆ.

1991ನೇ ವರ್ಷದಲ್ಲಿ ಬಳಸಲಾದ ವಿದ್ಯುಚ್ಛಕ್ತಿ

426 - ಶ್ರೀ ಸಿ.ಎಂ. ಲಿಂಗಪ್ಪ(ರಾಮನಗರ):ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 1991ನೇ ಜನವರಿ 1 ರಿಂದ ಡಿಸೆಂಬರ್ 31ರ ವರೆಗೆ ಹೊಸದಾಗಿ ಎಷ್ಟು ಮೆಗಾವಾಟ್ ವಿದ್ಯುಚ್ಛಕ್ತಿಯನ್ನು ಬಳಕೆ ಮಾಡಲು ಸಂಪರ್ಕವನ್ನು ಕೊಡಲಾಗಿದೆ.

ಆ) ಈ ಅವಧಿಯಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದಂತೆ ಎಷ್ಟು ಹೆಚ್ಚುವರಿ ವಿದ್ಯುಚ್ಛಕ್ತಿ ಉತ್ಪಾದನೆಯಾಗಿದೆ.

ಇ) 1992ನೇ ಸಾಲಿನಲ್ಲಿ ಎಷ್ಟು ಹೆಚ್ಚುವರಿ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡಲು ಗುರಿ ಹಾಕಿಕೊಳ್ಳಲಾಗಿದೆ.

ಶ್ರೀ ಎಂ. ರಾಮಪ್ಪ(ಇಂಧನ ರಾಜ್ಯ ಮಂತ್ರಿಗಳು):

ಅ) 1991ನೇ ಕ್ಯಾಲೆಂಡರ್ ವರ್ಷದಲ್ಲಿ 1-1-91ರಿಂದ 31-12-91ರವರೆಗೆ ಹೊಸದಾಗಿ 645 ಮೆ.ವಾ. ವಿದ್ಯುತ್ತನ್ನು ಬಳಕೆ ಮಾಡಲು ಸಂಪರ್ಕವನ್ನು ನೀಡಲಾಗಿದೆ.

ಆ) ಈ ಅವಧಿಯಲ್ಲಿ ಹಿಂದಿನ ವರ್ಷಕ್ಕೆ ಹೋಲಿಸಿದರೆ 1042 ದಶಲಕ್ಷ ಯೂನಿಟ್ಟು ಹೆಚ್ಚುವರಿ ವಿದ್ಯುಚ್ಛಕ್ತಿ ಉತ್ಪಾದನೆಯಾಗಿದೆ.

ಇ) 1992ನೇ ಸಾಲಿನಲ್ಲಿ ರಾಜ್ಯದಲ್ಲಿ ಉತ್ಪಾದನೆಯಾಗುವ ವಿದ್ಯುತ್‌ನ ಪ್ರಮಾಣವು ಜೂನ್ 1992ರಿಂದ ಬರುವ ಮಳೆಯನ್ನು ಅವಲಂಬಿಸಿದೆ. ಹೀಗಾಗಿ ಈಗಲೇ ಗುರಿಯನ್ನು ಸಿದ್ದ ಪಡಿಸಲು ಸಾಧ್ಯವಿಲ್ಲ.

ರಾಜ್ಯದಲ್ಲಿ ವಿದ್ಯುತ್ ತೊಂದರೆ

201-ಶ್ರೀ ಪಿ.ಸಿ. ಸಿದ್ದನಗೌಡರ್(ಕಲಘಟಗಿ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರೈತರ ಹಾಗೂ ಸಾರ್ವಜನಿಕರ ಪಂಪ್‌ಸೆಟ್ಟು ಮತ್ತು ಇತರೆ ವ್ಯವಹಾರಗಳಿಗೆ ವಿದ್ಯುತ್ ಅವಲಂಬನೆ ಪಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಕರ್ನಾಟಕ ರಾಜ್ಯ ವಿದ್ಯುತ್ ಮಂಡಳಿಯಿಂದ ರೈತರಿಗೆ ಹಾಗೂ ಸಾರ್ವಜನಿಕರಿಗೆ ಮೇಲಿಂದ ಮೇಲೆ ವಿದ್ಯುತ್ ಅಡಚಣೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಬಂದಿದ್ದಲ್ಲಿ 1990-91ರಲ್ಲಿ ಸಾಕಷ್ಟು ಪ್ರಮಾಣದಲ್ಲಿ ಮಳೆಯಾಗಿದ್ದರೂ ವಿದ್ಯುತ್ ಅಡಚಣೆ ಮತ್ತು ಆ ಬಗ್ಗೆ ಮಂಡಳಿಯವರ ನಿರಾಸಕ್ತಿಗೆ ಕಾರಣಗಳೇನು?

ಈ) ರಾಜ್ಯದಲ್ಲಿರುವ 330 ಕೆ.ವಿ. ಗ್ರಿಡ್ಡಿಂಗ್ ಇರುವ ಕೇಂದ್ರಗಳ ಸಂಖ್ಯೆ ಎಷ್ಟು ಹಾಗೂ ಅವು ಎಲ್ಲೆಲ್ಲಿ ಇವೆ.

ಉ) ಈ ಗ್ರಿಡ್ಡಿಂಗ್‌ಗೆ ಅವಶ್ಯವಿರುವಷ್ಟು ಸಿಬ್ಬಂದಿ ಇರುವರೇ? ಒಂದು ಗ್ರಿಡ್ಡಿಂಗ್ ಹತ್ತಿರ ಇರುವ ಸಿಬ್ಬಂದಿ ಸಂಖ್ಯೆ ಎಷ್ಟು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು):

ಅ) ಹೌದು.

ಆ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ತನ್ನ ಎಲ್ಲಾ ಗ್ರಾಹಕರುಗಳಿಗೆ ಅಡಚಣೆಯಿಲ್ಲದೆ ನಿರಂತರವಾಗಿ ವಿದ್ಯುತ್ ಸರಬರಾಜನ್ನು ಮಾಡಲು ಸದಾ ಶ್ರಮಿಸುತ್ತಿದೆ. ಆದರೆ ವ್ಯವಸ್ಥೆಯಲ್ಲಿ ಉಂಟಾಗುವ ವ್ಯತ್ಯಯ, ಪೀಕ್ ಲೋಡ್ ವೇಳೆಗಳಲ್ಲಿ ವಿದ್ಯುತ್ ಬೇಡಿಕೆಯನ್ನು ಲಭ್ಯತೆಗೆ ಸರಿದೂಗಿಸಲು ನಿಯಮಿತ ಮತ್ತು ಅನಿಯಮಿತ ಲೋಡ್ ಷೆಡ್ಡಿಂಗ್‌ನ್ನು ನಿರ್ವಹಿಸಬೇಕಾಗುತ್ತದೆ. ಇದು ಅನಿವಾರ್ಯ. ಹಾಗಿಲ್ಲದಿದ್ದಲ್ಲಿ ಇಡೀ ವ್ಯವಸ್ಥೆಯೇ ಸಂಪೂರ್ಣವಾಗಿ ಕುಸಿಯುವ ಸಂದರ್ಭವಿರುತ್ತದೆ. ಈ ನಿಯಮಿತ ಮತ್ತು ಅನಿಯಮಿತ ಲೋಡ್‌ಷೆಡ್ಡಿಂಗ್‌ನ ಅವಧಿಯನ್ನು ಆದಷ್ಟು ಕನಿಷ್ಟಗೊಳಿಸಲು ಮಂಡಳಿಯು ಪ್ರಯತ್ನಿಸುತ್ತಿರುತ್ತದೆ. ಈ ವಿಷಯದಲ್ಲಿ ಗ್ರಾಹಕರು ಮಂಡಳಿಯೊಡನೆ ಸಹಕರಿಸಬೇಕಾಗಿದೆ.

ಇ) ವಿದ್ಯುತ್ ಸರಬರಾಜಿನ ವಿಷಯದಲ್ಲಿ ಮಂಡಳಿಯು ನಿರಾಸಕ್ತಿ ವಹಿಸುತ್ತಿಲ್ಲ. ಪೀಕ್ ಲೋಡ್ ವೇಳೆಗಳಲ್ಲಿ ವ್ಯವಸ್ಥೆಯ ನಿರ್ವಹಣೆಯ ಸ್ವಲ್ಪ ತ್ರಾಸದಾಯಕ. ಹೀಗಾಗಿ ಅನಿಯಮಿತ ಮತ್ತು ನಿಯಮಿತ ಲೋಡ್‌ಷೆಡ್ಡಿಂಗ್ ಮಾಡುವುದು ಅನಿವಾರ್ಯವಾಗಿದೆ. ಈ ವಿಷಯದಲ್ಲಿ ಗ್ರಾಹಕರ ಸಹಕಾರ ಅತ್ಯಗತ್ಯ.

ಈ) ರಾಜ್ಯದಲ್ಲಿ 330 ಕೆ.ವಿ. ಗ್ರಿಡ್ ವ್ಯವಸ್ಥೆ ಇಲ್ಲ. 220 ಕೆ.ವಿ. ಗ್ರಿಡ್ ಸ್ಟೇಷನ್‌ಗಳಿವೆ. ಇವುಗಳ ಸಂಖ್ಯೆ 18. ಇರುವ ಸ್ಥಳಗಳು ಕೆಳಕಂಡಂತಿವೆ:

1) ಪೀಣ್ಯ (ಬೆಂಗಳೂರು) 2) ಹೂಡಿ(ಬೆಂಗಳೂರು) 3) ಸುಬ್ರಹ್ಮಣ್ಯಪುರ (ಬೆಂಗಳೂರು) 4) ಸೋಮನಹಳ್ಳಿ(ಬೆಂಗಳೂರು) 5) ಕೋಲಾರ 6) ಗೌರಿಬಿದನೂರು 7) ಹೂಟಗಳ್ಳಿ (ಮೈಸೂರು) 8) ಶಿವಮೊಗ್ಗ 9) ಮಂಗಳೂರು 10) ಹುಬ್ಬಳ್ಳಿ 11) ದಾವಣಗೆರೆ 12) ಬೆಳಗಾವಿ 13) ಮಹಾಲಿಂಗಪುರ 14) ಷಹಬಾದ್ 15) ಲಿಂಗಾಪುರ 16)ರಾಯಚೂರು 17) ಹಿರಿಯೂರು ಮತ್ತು 18) ಟಿ.ಕೆ.ಹಳ್ಳಿ (ಮಳವಳ್ಳಿ ತಾಲ್ಲೂಕು)

ಊ) ಪ್ರತಿ 220 ಕೆ.ವಿ. ಗ್ರಿಡ್‌ಸ್ಟೇಷನ್‌ನಲ್ಲಿ ಅವಶ್ಯವಿರುವಷ್ಟು ಸಿಬ್ಬಂದಿ ಇದ್ದಾರೆ. ಒಂದು 220 ಕೆವಿ ಗ್ರಿಡ್‌ಸ್ಟೇಷನ್‌ನಲ್ಲಿ ಅಳವಡಿಸಲಾಗಿರುವ ಟ್ರಾನ್ಸ್‌ಫಾರ್ಮರ್‌ಗಳ ಸಂಖ್ಯೆ, ಸ್ವಿಚ್‌ಗೇರೆ ಇತ್ಯಾದಿಗಳಿಗನುಗುಣವಾಗಿ ಪಾಳಿ ಕೆಲಸ ಮತ್ತು ನಿರ್ವಹಣೆಯ ಕೆಲಸಕ್ಕೆ ಅವಶ್ಯವಿರುವಷ್ಟು ಸಿಬ್ಬಂದಿಯನ್ನು ಮಂಜೂರು ಮಾಡಲಾಗುತ್ತಿದೆ. ಮೇಲಿನ ಎಲ್ಲ ಹದಿನೆಂಟು 220ಕೆ.ವಿ. ಸ್ಟೇಷನ್‌ಗಳಲ್ಲಿರುವ ಸಿಬ್ಬಂದಿಯ ಒಟ್ಟು ಸಂಖ್ಯೆ:3006.

ಶ್ರೀ ಶಿವಾನಂದ ಎಚ್. ಕೌಜಲಗಿ : ಮಾನ್ಯ ಅಧ್ಯಕ್ಷರೇ ಲಿಖಿತ ಮೂಲಕ ನೀಡುವ ಪ್ರಶ್ನೆಗಳಿಗೆ ಉತ್ತರಗಳೇ ಬರುವುದಿಲ್ಲ.

ಅಧ್ಯಕ್ಷರು : ಯಾವ ಉತ್ತರ ಬಂದಿಲ್ಲ?

ಶ್ರೀ ಶಿವಾನಂದ ಎಚ್. ಕೌಜಲಗಿ : 24ನೇ ತಾರೀಖು 25ನೇ ತಾರೀಖು ಮತ್ತು ಇವತ್ತಿನ ಪ್ರಶ್ನೆಗಳಿಗೆ ಉತ್ತರಗಳೇ ಬಂದಿಲ್ಲ. ಒಂದು ಪ್ರಶ್ನೆಗೂ ಉತ್ತರ ಬರದಿದ್ದರೆ ಏನು ಮಾಡಬೇಕು? ಉತ್ತರ ಕೊಡದಿದ್ದರೆ ಲಿಖಿತ ಮೂಲಕ ನೀಡಲಾಗುವ ಉತ್ತರಗಳನ್ನು ಸಭೆಯ ಮುಂದೆ ಇಡುವುದನ್ನು ಬಂದ್ ಮಾಡಿ.

ಅಧ್ಯಕ್ಷರು : ಲಿಖಿತ ಮೂಲಕ ಉತ್ತರ ನೀಡುವ 79 ಪ್ರಶ್ನೆಗಳು ಇವೆ. ಅದರಲ್ಲಿ 70 ಪ್ರಶ್ನೆಗಳಿಗೆ ಉತ್ತರಗಳು ಬಂದಿವೆ. ಇನ್ನು 9 ಪ್ರಶ್ನೆಗಳಿಗೆ ಉತ್ತರಗಳು ಬಂದಿಲ್ಲ. ಬಂದ ಮೇಲೆ ತಮಗೆ ಸರ್ಕ್ಯುಲೇಟ್ ಮಾಡುತ್ತಾರೆ.

ಶ್ರೀ ಬಿ.ಎಚ್. ಬನ್ನಿಕೋಡ್ : ನಿನ್ನೆಯ ಪ್ರಶ್ನೆಗಳಿಗೂ ಉತ್ತರಗಳು ಬಂದಿಲ್ಲ. ಇವತ್ತೂ ಬಂದಿಲ್ಲ

ಅಧ್ಯಕ್ಷರು : ವಿಚಾರಿಸಿ ನಾನು ತಮಗೆ ತಿಳಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಕೆಲವು ಪ್ರಶ್ನೆಗಳಿಗೆ ಉತ್ತರಗಳು ಬಂದಿವೆ. ಸ್ವಾಮಿ.

ಶ್ರೀ ಶಿವಾನಂದ ಎಚ್. ಕೌಜಲಗಿ : ನಮಗೆ ಬಂದಿಲ್ಲ ನಾವು ಹೇಳುತ್ತೇನೆ. ನೀವು ಏನು ಫಾರ್ ಗೌರ್ನಮೆಂಟ್?

ಶ್ರೀ ವಾಟಾಳ್ ನಾಗರಾಜ್ : ಉತ್ತರ ಬಂದಿದೆ ಎಂದು ಹೇಳಿದರೆ ನಾವು ಫಾರ್ ಗೌರ್ನಮೆಂಟ್ ಎಂದು ತಿಳಿಯುವುದೇ ನಾವು ಇಂಥಾದ್ದಕ್ಕೆ ಏನು ಮಾಡುವುದು?

ಅಧ್ಯಕ್ಷರು : ಉತ್ತರ ಬಂದಿದೆ ಎಂದು ಅವರು ನನಗೆ ಹೇಳಿದರು.

ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು.

1. ಡಿ.ಪಿ.ಎ.ಆರ್. ಕಾರ್ಯದರ್ಶಿಗಳನ್ನು ಒಳಗೊಂಡಂತೆ 5ಜನ ಕಾರ್ಯದರ್ಶಿಗಳ ಟೆಲಿಫೋನ್ ಡಿಸ್‌ಕನೆಕ್ಷನ್.

+ ಡಾ. ಜೀವರಾಜ ಆಳ್ವ : ಮಾನ್ಯ ಅಧ್ಯಕ್ಷರೇ ಫೈನಾನ್‌ಷ್ಯಲ್ ಮ್ಯಾನೇಜ್‌ಮೆಂಟ್ ಬಗ್ಗೆ I have one valid point most crucial point.

ಸರ್ಕಾರ ದಿವಾಳಿಯಾಗಿದೆ. ಇವತ್ತು ಡಿ.ಪಿ.ಎ.ಆರ್. ಸೆಕ್ರೆಟರಿ ಟೆಲಿಫೋನ್ ಒಳಗೊಂಡಂತೆ 5 ಜನ ಸೆಕ್ರೆಟರಿಗಳ ಟೆಲಿಫೋನ್‌ಅನ್ನು ಡಿಸ್‌ಕನೆಕ್ಟ್ ಮಾಡಿದ್ದಾರೆ. ನಾನು ಒಂದೇ ಒಂದು ಪ್ರಶ್ನೆ ಕೇಳುವುದು ಸೆಕ್ರೆಟರಿಗಳ ಟೆಲಿಫೋನ್ ಡಿಸ್‌ಕನೆಕ್ಟ್ ಮಾಡಿರುವುದು ಹೌದೋ ಅಲ್ಲವೋ ಅಷ್ಟು ಹೇಳಿದರೆ ಸಾಕು.

D.P.A.R is a most crucial department. Telephone has been disconnected for non-payment of bills.

5 ಲಕ್ಷ ರೂಪಾಯಿ ಹಣ ಕೊಡದೆ ಇರತಕ್ಕಂಥ ಪರಿಸ್ಥಿತಿಯಿಂದ ಈ ರೀತಿ ಆಗಿದೆ.